**Code No.: MK-01**

Total No. of Questions : 6 Total No. of Printed Pages : 4

# ಸ್ನಾತಕ ಪರೀಕ್ಷೆ – ೨೦೧೫

## ಬಿ.ಎ. – ವಿದ್ವನ್ಮಧ್ಯಮ – ಪ್ರಥಮ ವರ್ಷ

### ವಿಷಯ – ಕನ್ನಡ

ದಿನಾಂಕ – 27-3-2015 ಗರಿಷ್ಠ ಅಂಕ – ೧೦೦

ಸಮಯ – 10.00 A.M. to 1.00 P.M. Max. Marks – 100

---

**I. ೧. ಈ ಕೆಳಗಿನ ಪ್ರತಿ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಬರೆಯಿರಿ : 10 × 1 = 10**

೧. ಅವಶ್ಯ ಪದದ ವಿರುದ್ಧ ಪದ __________.

(ಅ) ವಶ್ಯ (ಆ) ಅನವಶ್ಯ

(ಇ) ಅತ್ಯವಶ್ಯ (ಈ) ಅನಾವಶ್ಯ

೨. ಮಳೆಗಾಲ ಪದವು ಈ ಸಂಧಿಗೆ ಉದಾಹರಣೆಯಾಗಿದೆ.

(ಅ) ಆಗಮಸಂಧಿ (ಆ) ಲೋಪಸಂಧಿ

(ಇ) ಗುಣಸಂಧಿ (ಈ) ಆದೇಶಸಂಧಿ

೩. ದ್ರವ್ಯ ಪದದ ಅರ್ಥ __________.

(ಅ) ನೀರು (ಆ) ಲೋಭ

(ಇ) ದ್ರಾವಣ (ಈ) ಸಂಪತ್ತು

೪. 'ಚಳಿಗಾಲ' ಪದವನ್ನು ಬಿಡಿಸಿ ಬರೆದಾಗ __________.

(ಅ) ಚಳಿ + ಕಾಲ (ಆ) ಚಳಿ + ಗಾಲ

(ಇ) ಅಳಿ + ಕಾಲ (ಈ) ಅಳಿ + ಗಾಲ

೫. ಇವುಗಳಲ್ಲಿ ಅನುಕರಣಾ ವ್ಯಯವನ್ನು ಗುರುತಿಸಿ.

(ಅ) ಬೇಗ ಬೇಗ (ಆ) ಕುದ್ದು ಕುದ್ದು

(ಇ) ನಳನಳಿಸು (ಈ) ಆಟಪಾಠ

೬. ಪ್ರಬಂಧವನ್ನು ಇಂಗ್ಲೀಷಿನಲ್ಲಿ ಏನೆಂದು ಕರೆಯುತ್ತಾರೆ?

(ಅ) Essay (ಆ) Critic

(ಇ) Drama (ಈ) Poetry

೭. 'ಋಷಿ' ಪದದ ತದ್ಭವ ರೂಪ

(ಅ) ರುಸಿ (ಆ) ಋಸಿ

(ಇ) ರಿಸಿ (ಈ) ಋಷಿ

೮. 'ಸುರ' ಪದದ ವಿರುದ್ಧ ಪದ

(ಅ) ರಾಕ್ಷಸ (ಆ) ಅಸುರ

(ಇ) ವಾನರ (ಈ) ದೇವರು

**Code No.: MK-01**

೯. 'ಕಾಡನ್ನು' ಪದವನ್ನು ಬಿಡಿಸಿ ಬರೆದಾಗ

(ಅ) ಕಾಡು + ಅನ್ನು (ಆ) ಕಾಡ + ಅನ್ನು

(ಇ) ಕಾಡಿಂದ + ಅನ್ನು (ಈ) ಕಾಡಿನಲ್ಲಿ + ಅನ್ನು

೧೦. 'ಕಂಬಿಕೀಳು' ಎಂದರೆ ಅರ್ಥ ಇದಾಗಿದೆ

(ಅ) ಕಂಬಿಯನ್ನು ಕೀಳು (ಆ) ಓಡಿ ಹೋಗು

(ಇ) ಕಂಬಿಯನ್ನ ಹಾಕು (ಈ) ಕಂಬಿ ಮುರಿ

**೨. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿಸಿ : 5 × 1 = 5**

೧. ವಿನಯ ಪದದ ವಿರುದ್ಧ ಪದ __________.

೨. ಕನಕದಾಸರ ಮೊದಲ ಹೆಸರು __________.

೩. ಪುರಂದರದಾಸರ ಮೊದಲ ಹೆಸರು __________.

೪. 'ಕನ್ನೈದಿಲೆ' ಪದದ ಅರ್ಥ __________.

೫. 'ವಿದ್ಯೆ' ಪದದ ತದ್ಭವ ರೂಪ __________.

**II. ೧. ಆವರಣದಲ್ಲಿ ಸೂಚಿಸಿದಂತೆ ಬರೆಯಿರಿ : 5 × 1 = 5**

೧) ರಸ್ತೆಗಳಲ್ಲಿ ಕಸದ ರಾಶಿ ಹಚ್ಚುತ್ತಲೇ ಇದೆ.
(ಈ ವಾಕ್ಯದ ಕಾಲವನ್ನು ಗುರ್ತಿಸಿ)

೨) 'ರಾಮನು' ಶಾಲೆಗೆ ಹೋದನು.
(ಗೆರೆ ಎಳೆದ ಪದದ ವಿಭಕ್ತಿ ಪ್ರತ್ಯಯವನ್ನು ಗುರುತಿಸಿ)

೩) ಪೃಥ್ವಿ, ನೆಲ, ಭೂಮಿ, ಆಕಾಶ
(ಗುಂಪಿಗೆ ಸೇರದ ಪದ ಗುರುತಿಸಿ)

೪) ಹಳ್ಳಿಯಲ್ಲಿ ಕಳ್ಳತನವಾಗಿತ್ತು.
(ಗೆರೆ ಎಳೆದ ಪದದ ವಿಭಕ್ತಿ ಪ್ರತ್ಯಯ ತಿಳಿಸಿ)

೫) ರಾವಣನು ಸೀತೆಯನ್ನು ಅಪಹರಿಸುವನು
(ಈ ವಾಕ್ಯವನ್ನು ಭೂತಕಾಲಕ್ಕೆ ಪರಿವರ್ತಿಸಿ)

**೨. ಹೊಂದಿಸಿ ಬರೆಯಿರಿ : 5 × 1 = 5**

| 'ಅ' | 'ಆ' |
|---|---|
| ೧) ಚನ್ನಮಲ್ಲಿಕಾರ್ಜುನ | ಕಾಳಿದಾಸ |
| ೨) ಮಂಕುತಿಮ್ಮನ ಕಗ್ಗ | ಅಕ್ಕಮಹಾದೇವಿ |
| ೩) ಅಹಲ್ಯೆ | ಡಿ.ವಿ.ಜಿ. |
| ೪) ಪುರಂದರ ವಿಠಲ | ಪು.ತಿ.ನ. |
| ೫) ಶಾಕುಂತಲ | ಪುರಂದರದಾಸ |

**Code No.: MK-01**

**III. ೧. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ :** **10 × 1 = 10**

೧) ಅಲ್ಲಮ ಪ್ರಭುವಿನ ವಚನಗಳ ಅಂಕಿತ ಯಾವುದು?

೨) 'ಸಂಸ್ಕೃತ ಮಾತೆ' ಕವನವನ್ನು ಬರೆದ ಕವಿ ಯಾರು?

೩) ತೀ.ತಾ. ಶರ್ಮರಿಗೆ ಇದ್ದ ಬಿರುದು ಯಾವುದು?

೪) ''ಅಷ್ಟ ವಿಧಾರ್ಚನೆಯ ಮಾಹಿ' ವಚನ ಬರೆದವರು ಯಾರು?

೫) ಕುಚೇಲೋಪಾಖ್ಯಾನ ಕವಿತೆಯ ಕರ್ತೃ ಯಾರು?

೬) ಬಾಗಿಲನು ತೆರೆದು ಸೇವೆಯನು ಕೊಡುಹರಿಯೇ ಎಂದ ಕೀರ್ತನಕಾರರು ಯಾರು?

೭) ನಮ್ಮ ಮನೆಯ ದೀಪ ಪ್ರಬಂಧದ ಕರ್ತೃ ಯಾರು?

೮) ಬ್ಲಾಸ್ಟ್ ಫರ್ನೇಸಿನ ಪೂಜಾರಿ ಪ್ರಬಂಧದ ಕರ್ತೃ ಯಾರು?

೯) ಕನಕದಾಸರ ಜನ್ಮ ಸ್ಥಳ ಯಾವುದು?

೧೦) ಅನುಭವ ಮಂಟಪದ ಸ್ಥಾಪಕರು ಯಾರು?

**೨. ಗದ್ಯಭಾಗವನ್ನು ಓದಿ, ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** **5 × 1 = 5**

ಕಾಳಿದಾಸನು ಭರತಖಂಡದ ಕವಿಗಳಲ್ಲಿ ಶ್ರೇಷ್ಠನಾದವನೆಂಬುದು ನಿರ್ವಿವಾದದ ವಿಷಯ. ಈತ ವರಕವಿ, ಕವಿಕುಲಗುರು, ಅನೇಕ ಶತಮಾನಗಳಿಂದಲೂ ಈತನ ಕಾವ್ಯಗಳು ಸಹೃದಯರಿಗೆ ಸಂತೋಷವನ್ನುಂಟು ಮಾಡಿವೆ. ಇಷ್ಟಾದರೂ ಈತನ ಕಾಲ ಮತ್ತು ಚರಿತ್ರೆ ನಮಗೆ ಇನ್ನೂ ನಿರ್ದಿಷ್ಟವಾಗಿ ಗೊತ್ತಿಲ್ಲದಿರುವುದು ವಿಷಾದವನ್ನು ಆಶ್ಚರ್ಯವನ್ನೂ ಉಂಟು ಮಾಡುತ್ತದೆ.

ಈತ ಕ್ರಿ.ಪೂ. ೧ನೆಯ ಶತಮಾನದಲ್ಲಿದ್ದನೆಂದು ಕೆಲವರೂ, ಕ್ರಿ.ಶ. ೬ನೆಯ ಶತಮಾನದಲ್ಲಿ ಜೀವಿಸಿದ್ದನೆಂದೂ ಮತ್ತೆ ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಕ್ರಿ.ಶ. ೫ನೆಯ ಶತಮಾನದ ಆದಿಭಾಗದಲ್ಲಿ ಇದ್ದು ಗ್ರಂಥ ರಚನೆ ಮಾಡಿದನೆಂಬುದು ಪ್ರಸಿದ್ಧ ವಿದ್ವಾಂಸರ ಅಭಿಪ್ರಾಯ. ಈತನ ವಿಷಯವಾಗಿ ನಮಗೆ ಹೆಚ್ಚು ತಿಳಿಯದಿದ್ದರೂ, ವಿಕ್ರಮನೆಂಬೊಬ್ಬ ದೊಡ್ಡ ದೊರೆಯ ಆಶ್ರಯಕ್ಕೆ ಒಳಗಾಗಿದ್ದನೆಂಬುದು ಮಾತ್ರ ಸ್ಪಷ್ಟವಾಗಿದೆ. ಕಾಳಿದಾಸನು ಹತ್ತಾರು ಗ್ರಂಥಗಳನ್ನು ಬರೆದಿದ್ದಾನೆಂಬ ಪ್ರತೀತಿಯಿದ್ದರೂ. ಆತನ ಮಾಲವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ, ಶಾಕುಂತಲ ಎಂಬ ಮೂರು ನಾಟಕಗಳನ್ನು, ಋತು ಸಂಹಾರ ಮತ್ತು ಮೇಘದೂತ ಎಂಬೆರಡು ಖಂಡ ಕಾವ್ಯಗಳನ್ನು. ಕುಮಾರ ಸಂಭವ ಮತ್ತು ರಘುವಂಶವೆಂಬ ಮಹಾಕಾವ್ಯಗಳ ಕರ್ತೃ ಮಾತ್ರವೆಂಬುದು ವಿಮರ್ಶಕರ ಅಭಿಪ್ರಾಯ.

೧) ಕಾಳಿದಾಸನನ್ನು ಕುರಿತ ಯಾವ ಸಂಗತಿ ನಮಗೆ ವಿಷಾದವನ್ನು ಆಶ್ಚರ್ಯವನ್ನು ಉಂಟು ಮಾಡುತ್ತದೆ?

೨) ಕಾಳಿದಾಸನ ಜೀವಿತ ಕಾಲದ ಬಗ್ಗೆ ಇರುವ ವಿವಿಧ ಅಭಿಪ್ರಾಯಗಳಾವುವು?

೩) ಈ ಗದ್ಯಭಾಗದಲ್ಲಿ ಕಾಳಿದಾಸನನ್ನು ಯಾವ ಬಿರುದುಗಳಿಂದ ಕರೆಯಲಾಗಿದೆ?

೪) ಕಾಳಿದಾಸನಿಂದ ರಚಿತವಾದ ಕೃತಿಗಳನ್ನು ಹೆಸರಿಸಿ.

೫) ಕಾಳಿದಾಸನಿಗೆ ಆಶ್ರಯ ನೀಡಿದ್ದ ರಾಜ ಯಾರು?

**IV. ೩. ಈ ಕೆಳಗಿನ ಪ್ರಶ್ನೆಗಳಿಗೆ ೨–೩ ವಾಕ್ಯಗಳಲ್ಲಿ ಉತ್ತರಿಸಿರಿ :** **10 × 2 = 20**

೧) ವಚನ ಚಳುವಳಿಯ ಉಗಮ ಯಾವ ಶತಮಾನದಲ್ಲಿ ಕಂಡು ಬಂದಿತು? ವಚನ ಚಳುವಳಿಯ ರೂವಾರಿಗಳಾರು?

೨) ಅಲ್ಲಮ ಪ್ರಭುವಿನ ವಚನಗಳ ಮಹತ್ವವನ್ನು ವಿವರಿಸಿ.

೩) ಶರಣಸತಿ–ಲಿಂಗಪತಿ ತತ್ವವನ್ನು ಅಕ್ಕಮಹಾದೇವಿ ವಚನಗಳ ಹಿನ್ನೆಲೆಯಲ್ಲಿ ಚರ್ಚಿಸಿ.

೪) ಪ್ರಬಂಧ ಎಂದರೇನು?

೫) ಕಾಳಿದಾಸನ ಕಾವ್ಯಗಳು ಯಾವುವು?

೬) ಕನಕದಾಸರ ಕಾವ್ಯಗಳು ಯಾವುವು?

೭) ಪುರಂದರದಾಸ ಹಾಗೂ ಕನಕದಾಸರ ಅಂಕಿತನಾಮ ತಿಳಿಸಿ.

೮) 'ಮರೆಯಲಾಗದ ನನ್ನ ಮೂವರು ಗುರುಗಳು' ಹಾಗೂ 'ಬ್ಲಾಸ್ಟ್ ಫರ್ನೇಸಿನ ಪೂಜಾರಿ' ಪ್ರಬಂಧಗಳ ಕರ್ತೃ ಯಾರು?

೯) 'ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ' ಈ ವಚನದ ಹಿನ್ನೆಲೆಯಲ್ಲಿ ಬಸವಣ್ಣನವರ ವಚನದ ವೈಶಿಷ್ಟ್ಯವನ್ನು ತಿಳಿಸಿ.

೧೦) ಪುರಂದರದಾಸರು ಬಿನ್ನಹಕೆ ಬಾಯಿಲ್ಲವಯ್ಯ ಎಂದು ಏಕೆ ಹೇಳುತ್ತಾರೆ?

**ಆ. ಇಬ್ಬರು ಲೇಖಕರ ಕಾಲ, ಸ್ಥಳ ಹಾಗೂ ಕೃತಿಗಳನ್ನು ತಿಳಿಸಿರಿ : 2 × 3 = 6**

೧. ಕುವೆಂಪು

೨. ಪು.ತಿ.ನ.

೩. ತೀ.ತಾ. ಶರ್ಮ

**V. ಅ. ಯಾವುದಾದರೂ ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ : 1 × 3 = 3**

೧. ಮಾತು ಬೆಳ್ಳಿ, ಮೌನ ಬಂಗಾರ.

೨. ಬೆಳ್ಳಗಿರುವುದೆಲ್ಲಾ ಹಾಲಲ್ಲ.

**ಆ. ಕೆಳಗಿನ ಮೂರು ವಾಕ್ಯಗಳನ್ನು ಸಂದರ್ಭಸಹಿತ ವಿವರಿಸಿ : 3 × 3 = 9**

೧) 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ'.

೨) ''ಹಾಡುವುದರಲ್ಲಿ ಮಾತ್ರವಲ್ಲ; ಅಡಿಗೆ ಮಾಡುವುದರಲ್ಲೂ ಅವರಿಗೆ ಸಲ್ಲಬೇಕು, ಅಗ್ರ ತಾಂಬೂಲ''.

೩) 'ರಮಾ, ತಾಯಿಯಂತೆಯೇ ಕುಳ್ಳಿ ಎಂಬುದೇನೊ ನಿಶ್ಚಿತ'.

೪) 'ಶಿಲೆಯೊಳಗಣ ಪಾವಕನಂತೆ'.

**VI. ಅ. ಯಾವುದಾದರೂ ಮೂರು ವಿಷಯವನ್ನು ಕುರಿತು ಟಿಪ್ಪಣಿ ಬರೆಯಿರಿ : 3 × 4 = 12**

೧. ಬಾಗಿಲನು ತೆರೆದು ಕೀರ್ತನೆಗಳ ಹಿನ್ನಲೆಯಲ್ಲಿ ಕನಕದಾಸರ ಕೀರ್ತನೆಗಳ ಮಹತ್ವವನ್ನು ತಿಳಿಸಿ.

೨. ಲೇಖಕರು ಯಾರನ್ನು ಕುರಿತು ಮರೆಯಲಾಗದ ನನ್ನ ಮೂವರು ಗುರುಗಳು ಎಂದು ಕರೆಯುತ್ತಿದ್ದಾರೆ? ವಿವರಿಸಿ.

೩. ವಚನ ಸಾಹಿತ್ಯದಲ್ಲಿ ಅಕ್ಕಮಹಾದೇವಿಯ ವಚನಗಳ ಸ್ಥಾನವನ್ನು ವಿಶ್ಲೇಷಿಸಿ.

**ಆ. ಒಂದು ವಿಷಯಕ್ಕೆ ಪ್ರಬಂಧ ಬರೆಯಿರಿ : 1 × 10 = 10**

೧. ಕಪ್ಪು ಹಣ

೨. ಸ್ವಚ್ಛ ಭಾರತ ಆಂದೋಲನ